ಇನಾಂದಾರ್‌ರವರಿಗೆ ಹಾಗೂ ಮಾನ್ಯ ಕೃಷ್ಣಪ್ಪನವರಿಗೆ ಮಾನ್ಯ ಮುಖ್ಯಮಂತ್ರಿಗಳು ಆಥರೈಸ್ ಮಾಡಿಲ್ಲ. ಇವರು ಆಥರೈಸ್ ಮಾಡಿರುವುದು ಡಿ.ಬಿ.ಚಂದ್ರೇಗೌಡರವರಿಗೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಡಿ.ಬಿ.ಚಂದ್ರೇಗೌಡವರಿಗೆ ಆಥರೈಸ್ ಮಾಡಿರುವುದರಿಂದ ಅವರು ಉತ್ತರಿಸುತ್ತಾರೆ, ಆದರೆ ಅವರು ಊಟ ಮಾಡಿಕೊಂಡು ಬರುತ್ತೇನೆಂದು ಹೇಳಿಯೇ ಹೋಗಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಧ್ಯಕ್ಷರೆ, ತಾವು ದಯಮಾಡಿ ಬೇಸರಿಸಿಕೊಳ್ಳಬೇಡಿ, ಏಕೆಂದರೆ, ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ನಾವು ಜವಾಬ್ದಾರಿಯಿಂದ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡತಕ್ಕಂಥವರು, ಈ ಸಭೆ ಸರಿಹೋಗುವ ತನಕ ನಾವು ಸಭೆ ನಡೆಸುವುದಕ್ಕೆ ತಯಾರಿಲ್ಲ. ಸರ್ಕಾರದ ಅಲಕ್ಷ್ಯ, ನಿರ್ಲಕ್ಷ್ಯ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ. ಇಡೀ ರಾಜ್ಯದ ಸಮಸ್ಯೆಯನ್ನು ಚರ್ಚೆ ಮಾಡಬೇಕು ಎನ್ನುವುದು ಹಾಗೂ ಈ ಚರ್ಚೆಯನ್ನು ಕೇಳುವುದಕ್ಕೂ ಕೂಡ ಸರ್ಕಾರ ಸಿದ್ದವಿಲ್ಲ. ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ವೈ.ಕೆ.ರಾಮಯ್ಯನವರು, ಬಹಳ ಹಿರಿಯರು, ಅನುಭವ ಇರತಕ್ಕಂಥವರು, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಇವರ ಮಾತುಗಳನ್ನು ಸರ್ಕಾರಕ್ಕೆ ಕೇಳುವ ಸೌಜನ್ಯ ಇಲ್ಲದ ಮೇಲೆ ನಾವು ಇಲ್ಲಿ ಏಕೆ ಕುಳಿತುಕೊಳ್ಳಬೇಕು? ಅವರೇ ಕೋರಂ ಇಟ್ಟುಕೊಂಡು ಈ ಸಭೆಯನ್ನು ನಡೆಸಲಿ.

(ಈ ಹಂತದಲ್ಲಿ ಸನ್ಮಾನ್ಯ ಸದಸ್ಯರೊಡನೆ ಇತರೇ ಜನತಾ ದಳದ (ಯು) ಸದಸ್ಯರೂ ಕೂಡ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ, ಈಗಾಗಲೇ ಮಾನ್ಯ ಕೃಷ್ಣಪ್ಪನವರು ಹೇಳಿರುವುದರಿಂದ, ಇವತ್ತು ಒಂದು ದಿವಸಕ್ಕೆ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ, ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳೋಣ.

ಶ್ರೀ ಸಿ.ಭೈರೇಗೌಡ: ನಾನು ಇಲ್ಲಿ ಎದ್ದು ನಿಂತು ಪ್ರಶ್ನೆ ಕೇಳಬೇಕಾದರೆ ಎದುರುಗಡೆ ನೋಡಿದರೆ ನಮಗೆ ಮಾತನಾಡುವುದಕ್ಕೆ ಸ್ಫೂರ್ತಿ ಬರುತ್ತದೆ. ಖಾಲಿ ಕುರ್ಚಿ ನೋಡಿದರೆ ಏನು ಸ್ಫೂರ್ತಿ ಬರುತ್ತದೆ? ಗಮನ ಸೆಳೆಯುವ ಸೂಚನೆಯ ಸಂದರ್ಭದಲ್ಲಿ ಸಂಬಂಧಪಟ್ಟ ಸದಸ್ಯರು ಮಾತನಾಡುವಾಗ ಅವರ ಎದುರುಗಡೆ ಖಾಲಿ ಕುರ್ಚಿ ಇದ್ದರೆ ಅವರು ಹೇಗೆ ಗಮನ ಸೆಳೆಯುತ್ತಾರೆ? ಸರ್ಕಾರ ಎನ್ನುವುದು ಇದೆಯೇ? ಸರ್ಕಾರ ಅನ್ನುವುದು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ನಾವು ಯಾರ ಗಮನವನ್ನು ಸೆಳೆಯಬೇಕು? ಇದನ್ನು ವಿರೋಧಿಸಿ ನಾನು ಕೂಡ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಕೂಡ ಸಭಾತ್ಯಾಗ ಮಾಡಿದ್ದರು)

ಶ್ರೀ ಎಸ್.ಸುರೇಶ್ ಕುಮಾರ್: ನಮ್ಮ ಒಂದು ಆಗ್ರಹಕ್ಕೆ ನೀವು ತೇಲಿಸಿ ಉತ್ತರ ನೀಡುವುದನ್ನು ಕಲಿತಿದ್ದೀರಿ. ಹೀಗಾಗಿ ನಾವು ಅವರ ತರಹ ಸಭಾತ್ಯಾಗ ಮಾಡದೇ ಸಚಿವರು ಇಲ್ಲಿಗೆ ಬರುವ ತನಕ ನಾವು ಇಲ್ಲಿಯೇ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರ ಜೊತೆಗೆ ಇತರೇ ಬಿ.ಜೆ.ಪಿ.ಸದಸ್ಯರು ಸದನದ ಬಾವಿಗೆ ಬಂದು ಧರಣಿಯಲ್ಲಿ ಪಾಲ್ಗೊಂಡರು)

ಶ್ರೀ ಎ.ರಾಮದಾಸ್: ಅಧ್ಯಕ್ಷರೆ, ತಮಗೆ ನಾವು ಕೈಮುಗಿದು ಕೇಳುತ್ತೇವೆ, ತಾವು ಆ ಸ್ಥಾನದಲ್ಲಿ ಕುಳಿತು, ಈ ವಿಷಯದ ಬಗ್ಗೆ ಹತ್ತಾರು ಬಾರಿ ಹೇಳಿದರೂ ಸರ್ಕಾರ ಕಿವಿಗೊಡದಿರುವುದರ ಬಗ್ಗೆ ತಾವು ಗಂಭೀರವಾಗಿ ವಿಚಾರ ಮಾಡಬೇಕು. ಸರ್ಕಾರ ಏಕೆ ಈ ರೀತಿಯಾಗಿ ನಡೆದುಕೊಳ್ಳುತ್ತದೆ ಎನ್ನುವುದನ್ನು ತಾವು ತೀವ್ರವಾಗಿ ತೆಗೆದುಕೊಳ್ಳಬೇಕು? ಆದ್ದರಿಂದ ಸಂಬಂಧಪಟ್ಟ ಎಲ್ಲಾ ಮಂತ್ರಿಗಳು ಈ ಸದನಕ್ಕೆ ಬರುವತನಕ ನಾವು ಧರಣಿ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಕೃಷ್ಣಪ್ಪನವರು ಕ್ಯಾಬಿನೆಟ್ ಮಂತ್ರಿಗಳಾಗಿ ಜವಾಬ್ದಾರಿ ತೆಗೆದುಕೊಂಡಿರುವುದರಿಂದ ಅವರಿಗೆ ಒಂದು ಕೊನೆಯ ಅವಕಾಶ ಕೊಟ್ಟು ನೋಡಿ.

(ಗೊಂದಲ)

ಶ್ರೀ ಎ.ಕೃಷ್ಣಪ್ಪ: ಸ್ಪೆಷಲ್ ಕಂಪೆಲ್ಲಿಂಗ್ ರೀಸನ್ಸ್ ಎಂದು ನಾನು ಹೇಳಿದರೂ ಕೂಡ ನಮ್ಮ ಮಿತ್ರರು ನಮ್ಮ ಬಗ್ಗೆ ಕನಿಕರ ತೋರಿಸುತ್ತಾರೆಂದು ನಾನು ಭಾವಿಸಿದ್ದೆ, ಹೀಗಿದ್ದರೂ ಅವರು ಬಾವಿಯಲ್ಲಿ ಬಂದು ಧರಣಿಗೆ ಇಳಿದಿದ್ದಾರೆ, ನಾನು ಮತ್ತೊಮ್ಮೆ ಅವರಲ್ಲಿ ವಿನಂತಿಸುವುದೇನೆಂದರೆ, ನಮ್ಮ ಸಹೋದ್ಯೋಗಿ ಮಂತ್ರಿಗಳ ಮಗನ ಮದುವೆ ಇರುವುದರಿಂದ ಕೆಲವರು ಹೊರಗಡೆ ಹೋಗಿದ್ದಾರೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಎಷ್ಟು ಜನ ಮಂತ್ರಿಗಳು ಮದುವೆಗೆ ಹೋಗಿದ್ದಾರೆ ಎನ್ನುವ ಲೆಕ್ಕ ಕೊಡಲಿ, ತಮ್ಮ ಕಡೆಯಿಂದ ಎಷ್ಟು ಜನ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆನ್ನುವ ವಿಚಾರವನ್ನು ಕೂಡ ಹೇಳಿಬಿಡಿ. ಎಲ್ಲರಿಗೂ ಗೊತ್ತಿರುವಂತೆ ತಮ್ಮ ತಮ್ಮ ಪರ್ಸನಲ್ ಕೆಲಸವಿರುವುದರಿಂದ ಹೋಗುತ್ತಾರೆಂದು ಗೊತ್ತಿದೆ.

ಶ್ರೀ ಎ.ಕೃಷ್ಣಪ್ಪ: ನಾನು ಮತ್ತೊಮ್ಮೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ತಮಗೆ ಏನು ಪ್ರಶ್ನೆ ಬೇಕು ಅದನ್ನು ಹೇಳಿದರೆ ನಾವು ಸರ್ಕಾರದ ವತಿಯಿಂದ ಉತ್ತರ ಕೊಡುವುದಕ್ಕೆ ರೆಡಿ ಇದ್ದೇವೆ. ಅವರವರ ಸ್ಥಾನಕ್ಕೆ ಮರಳಬೇಕೆಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಆಯಾಯಾ ಮಂತ್ರಿಗಳ ಪರವಾಗಿ ಸಮಂಜಸವಾದ ಉತ್ತರವನ್ನು ನಾವು ಕೊಡುತ್ತೇವೆ.

ಅಧ್ಯಕ್ಷರು: ಒಟ್ಟು 10 ಜನ ಮಂತ್ರಿಗಳು ನನಗೆ ಕಾಗದ ಬರೆದು ತಿಳಿಸಿದ್ದಾರೆ. ಮಾನ್ಯ ಸಗೀರ್ ಅಹಮದ್‌ರವರು ವಿದೇಶದಲ್ಲಿ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕಾಗದ ಬರೆದು ಹೋಗಿರುತ್ತಾರೆ. ಮಾನ್ಯ ಚಂದ್ರೇಗೌಡರವರು ಅರ್ಧಗಂಟೆಯಲ್ಲಿ ಬರುತ್ತೇನೆಂದು ಹೇಳಿ ಹೋಗಿದ್ದಾರೆ. ಆದ್ದರಿಂದ, ಇವತ್ತು ಒಂದು ದಿವಸ ಅವಕಾಶ ಮಾಡಿ, ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ: ಸದನವನ್ನು ಮುಂದೂಡಿಬಿಡಿ.

ಅಧ್ಯಕ್ಷರು: ಸದನವನ್ನು ಮುಂದೂಡುವುದು ಅದು last resort. ಕೆಲವರು ಅನಾರೋಗ್ಯದ ನಿಮಿತ್ತದಿಂದ, ಕೆಲವರು ಫಾರಿನ್‌ನಲ್ಲಿ ಇದ್ದಾರೆ, ಕೆಲವರು ಊಟ ಮಾಡಿಕೊಂಡು ಬರುತ್ತಾರೆಂದು ಹೇಳಿದ್ದಾರೆ.

(ಗೊಂದಲ)

ನನಗೆ ಗೊತ್ತಿರುವ ಹಾಗೆ ಆ ಮನೆಯಲ್ಲಿ ಮತ್ತು ಈ ಮನೆಯಲ್ಲಿ ಯಾರ್ಯಾರು ಇರಬೇಕು ಎನ್ನುವ ಅಲಾಟ್‌ಮೆಂಟ್ ಪಟ್ಟಿ ಇರುತ್ತದೆ.

ಶ್ರೀ ಎಂ.ಪಿ.ನಾಡಗೌಡ (ಅಪ್ಪಾಜಿ) (ಸರ್ಕಾರಿ ಮುಖ್ಯ ಸಚೇತಕರು): ಸುಮಾರು ಹತ್ತು ಜನ ಮಂತ್ರಿಗಳು ಇವತ್ತು ನಮಗೆ ಬರುವುದಕ್ಕಾಗುವುದಿಲ್ಲವೆಂದು ತಮಗೂ ಹಾಗೂ ನಮಗೆ ಪತ್ರಗಳನ್ನು ಬರೆದಿದ್ದಾರೆ. ಮತ್ತೊಂದು ವಿಷಯ ಏನೆಂದರೆ, ಲಂಚ್ ಬ್ರೇಕ್ ಕೊಡದೆ ಬೆಳಿಗ್ಗೆಯಿಂದ ಸಂಜೆಯವರೆಗೆ ಹಾಗೆಯೇ ಸಭೆ ಮುಂದುವರಿಸಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಬೇಕಾದರೆ ತಾವು ಕೂಡ ಬಿ.ಎ.ಸಿ.ಯಲ್ಲಿ ಇದರ ಬಗ್ಗೆ ಮಾತನಾಡಬಹುದು. ಈ ರೀತಿ ಮಾಡುವುದರಿಂದ ಬಹುತೇಕ ಈ ಸಮಸ್ಯೆ ಬರುವುದಿಲ್ಲವೆಂದು ನನ್ನ ಭಾವನೆ.

ಅಧ್ಯಕ್ಷರು: ಆ ರೀತಿ ಅಲ್ಲ ಕಂಟಿನ್ಯೂಯಸ್ ಆಗಿ ಸಭೆ ನಡೆಯುತ್ತಿದ್ದರೆ ಯಾರ್ಯಾರಿಗೆ ಹಸಿವು ಆಗುತ್ತದೆ ಅಂಥವರು ಹೋಗಿ ಊಟ ಮಾಡಿಕೊಂಡು ಬರಬಹುದು ಎನ್ನುವ ರೀತಿಯಲ್ಲಿ ಅವರು ಹೇಳಿದರು.

ಶ್ರೀ ಬಿ. ಬಿ.ಶಿವಪ್ಪ: ಲಂಚ್ ಬಗ್ಗೆ ಅವರು ಮಾತನಾಡಿದರು. ಲಂಚ್‌ಗೆ ಬಿಟ್ಟರೆ ಮನಗೆ ಹೋಗಿ ಬರುವುದು, ಮನೆಯಲ್ಲಿ ಏನಾದರೂ ತೊಂದರೆಯಾಗುತ್ತದೆಂದು ಈ ಲಂಚ್ ತೆಗೆದು ಬಿಡಿ ಎಂದು ಅವರು ಹೇಳಿದರು. ನನ್ನನ್ನು ಕೇಳಿದರೆ ಯಾರೂ ಕೂಡ ಬ್ರೇಕ್‌ಫಾಸ್ಟ್ ಮಾಡಬಾರದು. ಏಕೆಂದರೆ, ಬೆಳಿಗ್ಗೆಯಿಂದ ಏಳು ಜನ ಮಂತ್ರಿಗಳು ಬಿಟ್ಟರೆ ಬೇರೆ ಯಾರೂ ಇಲ್ಲ. ಒಬ್ಬ ಮೆಂಬರ್ ಇಲ್ಲ. ಬೆಳಿಗ್ಗೆಯೇ ನಾನು ಈ ವಿಚಾರದ ಬಗ್ಗೆ ಪ್ರಸ್ತಾಪಿಸಬೇಕು ಅಂದುಕೊಂಡಿದ್ದೆ. ಆದರೆ ಬೇಡ ಎಂದು ಪ್ರಸ್ತಾಪಿಸಲಿಲ್ಲ. ಬೆಳಿಗ್ಗೆ ತಾವು, ನಾವು ಯಾವ ರೀತಿ ನಡೆದುಕೊಳ್ಳಬೇಕೆಂದು ಅಪ್ಪಣೆ ಕೊಡಿಸಿದಿರಿ. ವಿರೋಧ ಪಕ್ಷದಲ್ಲಿ ಕುಳಿತು ನಾವು ಮಾತನಾಡುವಾಗ ಅದಕ್ಕೆ ಉತ್ತರ ಕೊಡತಕ್ಕಂಥ ವ್ಯಕ್ತಿ ಇರಬೇಕಲ್ಲವೆ? ಎದುರುಗಡೆ ಅಂಥ ವ್ಯಕ್ತಿ ಇದ್ದಾಗ ಮಾತ್ರ ನಮಗೆ ಮಾತನಾಡಲು ಸ್ಫೂರ್ತಿ ಬರುತ್ತದೆ. ನಾನೊಬ್ಬ ಹಿರಿಯ ಸದಸ್ಯನಾಗಿದ್ದು ಎರಡನೇ ಬಾರಿಗೆ ಈ ಸದನಕ್ಕೆ ಬಂದಿದ್ದೇನೆ. ಒಂದು ವಿಷಯವನ್ನು ಇಲ್ಲಿ ಹೇಳಬೇಕೋ ಅಥವಾ ಬೇಡವೋ ಎಂಬುದು ಚಿಂತೆಯಾಗಿದೆ. ಆದರೂ ಕೂಡ ಹೇಳುತ್ತೇನೆ. ಏನೆಂದರೆ, 45 ಜನ ಮಂತ್ರಿಗಳು ಇವತ್ತು ನನಗೆ ಪರಿಚಯವಾಗಿಲ್ಲ. ಕೆಲವು ಹಿರಿಯ ಮಂತ್ರಿಗಳ ಹತ್ತಿರ ನನಗೇನಾದರೂ ಕೆಲಸ ಇದ್ದರೆ ಅವರ ಪಕ್ಕದಲ್ಲಿ ಕುಳಿತುಕೊಂಡು ಈ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾರೆಂದು ಕೇಳತಕ್ಕಂಥ ಪರಿಸ್ಥಿತಿ ನನಗೆ ಬಂದಿದೆ. ಮಾನ್ಯ ಹಿರಿಯ ಮಂತ್ರಿಗಳು ಈ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಅವರೆಂದು ಹೇಳಿದ ಮೇಲೆ ನಾನು ಅವರ ಪಕ್ಕಕ್ಕೆ ಪರಿಚಯ ಇಲ್ಲದೇ ಇದ್ದರೂ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಇವತ್ತಿನವರೆಗೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ 45 ಜನ ಮಂತ್ರಿಗಳನ್ನು ಒಟ್ಟಾಗಿ ಪರಿಚಯ ಮಾಡಿಕೊಟ್ಟಿಲ್ಲ. ಸದನಕ್ಕೆ ಎಲ್ಲಾ ಮಂತ್ರಿಗಳನ್ನು

ಪರಿಚಯ ಮಾಡಿಕೊಡತಕ್ಕಂಥ ಪದ್ಧತಿ ಇದೆ.

ಶ್ರೀ ಎ.ಎಂ.ಹಿಂಡಸಗೇರಿ: ಮಾನ್ಯ ಮುಖ್ಯಮಂತ್ರಿಗಳು ಮೊದಲನೆ ದಿವಸವೇ ಮಂತ್ರಿಗಳ ಪರಿಚಯವನ್ನು ಸದನಕ್ಕೆ ಮಾಡಿಕೊಟ್ಟಿದ್ದಾರೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೆ, 45 ಜನ ಮಂತ್ರಿಗಳು ಒಂದೇ ಜಾಗದಲ್ಲಿ ಕುಳಿತುಕೊಂಡಾಗ ಪರಿಚಯ ಮಾಡಿಕೊಟ್ಟಿಲ್ಲ. ತಾವು ಕಡತವನ್ನು ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ಮೊದಲನೇ ದಿವಸ ಮಾನ್ಯ ಮುಖ್ಯಮಂತ್ರಿಗಳು ಪರಿಚಯ ಮಾಡುವಂಥ ಸಂದರ್ಭದಲ್ಲಿ 45 ಜನ ಮಂತ್ರಿಗಳು ಇರಲಿಲ್ಲ. ನಾಳೆ ದಿವಸವಾದರೂ 45 ಜನ ಮಂತ್ರಿಗಳು ಒಂದೇ ಸಾರಿ ತಮ್ಮಗಳ ಪರಿಚಯವನ್ನು ಮಾಡಿಕೊಂಡರೆ ನಾನು ಅವರಿಗೆ ಚಿರಋಣಿಯಾಗಿರುತ್ತೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಸರ್ಕಾರದ ಮುಖ್ಯ ಸಚೇತಕರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅವರ ಸಲಹೆಯನ್ನು ನಾನು ಮಾಡುತ್ತೇನೆಂದು ಹೇಳುತ್ತಿಲ್ಲ, ನನಗೂ ಕೂಡ ನಿಮ್ಮ ಅಭಿಪ್ರಾಯ ಏನೆಂಬುದು ಗೊತ್ತಿದೆ. ಆದ್ದರಿಂದ ಈಗ 4-00 ಗಂಟೆಯವರೆಗೆ ಸಭೆಯನ್ನು ಮುಂದೂಡುತ್ತೇನೆ, ಅಷ್ಟರೊಳಗೆ ಮಂತ್ರಿಗಳನ್ನು ಕರೆಸುತ್ತಾರೆ.

(ಸದನವು 3ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 4-00ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು 4 ಗಂಟೆ 10 ನಿಮಿಷಕ್ಕೆ ಪಾರಂಭವಾಯಿತು) ಸಭಾಧ್ಯಕ್ಷರಾದ ಶ್ರೀ.ಎಂ.ವಿ.ವೆಂಕಟಪ್ಪ ನವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು)

(ಸದನವು ಸಮಾವೇಶಗೊಂಡಾಗ ಬಿಜೆಪಿಯ ಸದಸ್ಯರುಗಳು ಬಾವಿಯಲ್ಲಿ ಧರಣಿಯನ್ನು ಪ್ರಾರಂಭಿಸಿದ್ದರು)

ಅಧ್ಯಕ್ಷರು: ಮಾನ್ಯ ಮಂತ್ರಿಗಳಾದ ಶ್ರೀ ಮಹದೇವರವರೆ, ಇಷ್ಟು ಹೊತ್ತು ವಿಷಯವು ತಿಳಿಯಾಗಿದೆ, ಈಗ ತಾವು ಬೆಂಕಿ ಹಚ್ಚುತ್ತಿದ್ದೀರಿ? ಇಷ್ಟು ಹೊತ್ತು ನಮ್ಮ ಕಛೇರಿಯಲ್ಲಿ ತಿಳಿಯಾಗಿತ್ತು, ತಾವು ಬೆಂಕಿ ಮಹದೇವ ಆಗಿರುವುದರಿಂದ ಬೆಂಕಿ ಹಚ್ಚುತ್ತಿದ್ದೀರಿ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಬೆಂಕಿ ಮಹದೇವರವರ ಕೆಲಸವೇ ಬೆಂಕಿ ಇಡುವ ಕೆಲಸವಾಗಿದೆ.

ಶ್ರೀ ಎಂ.ಮಹದೇವ: ಇಷ್ಟು ಹೊತ್ತು ಅಸೆಂಬ್ಲಿಯೇ ಬಹಳ ಮಂಕಾಗಿಬಿಟ್ಟಿತ್ತು.

ಅಧ್ಯಕ್ಷರು: ಮಾನ್ಯ ಸಚಿವರಾದ ಶ್ರೀ ಮಹದೇವರವರೆ, ಸ್ವಲ್ಪ ತಾವು ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಬೇಕು. ಇಷ್ಟು ಹೊತ್ತು ನಮ್ಮ ಕಛೇರಿಯಲ್ಲಿ ವಿರೋಧಪಕ್ಷದ ನಾಯಕರು ಮತ್ತಿತರ ಸದಸ್ಯರುಗಳ ಜೊತೆ ಕುಳಿತು ನಾವು ಮಾತನಾಡಿದ್ದೇವೆ. ಬಹುಶಃ ಸರ್ಕಾರದ ಪರವಾಗಿ ಮಾನ್ಯ ಚಂದ್ರೇಗೌಡರು ಸದನಕ್ಕೆ ಬಂದಿದ್ದಾರೆ, ಅವರು ಉತ್ತರವನ್ನು ಕೊಡುತ್ತಾರೆ. ಮಾನ್ಯ ಚಂದ್ರೇಗೌಡರು, ಮೇಲ್ಮನೆಯಲ್ಲಿ ಸೇಲ್ಸ್‌ಟ್ಯಾಕ್ಸ್ ಬಿಲ್ ಬಗ್ಗೆ ಕಾರ್ಯನಿರತರಾಗಿದ್ದರು. ಅವರು

ಹಾಗೆ ಕಾಲವನ್ನು ವ್ಯಯ ಮಾಡುವವರಲ್ಲ, ಎರಡು ಕಡೆಯೂ ಅವರು ನೋಡಿಕೊಳ್ಳಬೇಕಾಗಿರುವುದರಿಂದ ಅವರಿಗೆ ಜವಾಬ್ದಾರಿ ಜಾಸ್ತಿ ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ: ನಾನು ಕೆಳಮನೆಯಿಂದ, ಮೇಲ್ಮನೆಗೆ, ಮೇಲ್ಮನೆಯಿಂದ ಕೆಳಮನೆಗೆ ವಾಕಿಂಗ್ ಮಾಡಬೇಕಾಗಿದೆ.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರೆ, ವಾಕಿಂಗ್ ಮಾಡುವುದು ಆರೋಗ್ಯಕ್ಕೆ ಒಳ್ಳೆಯದಲ್ಲವೆ?

ಶ್ರೀ ಎಸ್.ಎಸ್.ಪಾಟೀಲ್: ಈ ದಿವಸ ಯಾವ ಯಾವ ಮಂತ್ರಿಗಳನ್ನು ತಾವು ನೇಮಿಸಿದ್ದೀರಿ ಅದನ್ನು ದಯವಿಟ್ಟು ನಮಗೆ ಹೇಳಬೇಕು. ಅವರು ಎಲ್ಲಿ ಹೋಗಿದ್ದಾರೆ, ಅವರಿಗೆ ಏನು ಕೆಲಸವಿತ್ತು ಎಂಬುದನ್ನು ತರಿಸಿಕೊಳ್ಳಬೇಕು,

ಅಧ್ಯಕ್ಷರು: ರೊಟೇಷನ್ ಮೂಲಕ ಕೆಳಮನೆಯಲ್ಲಿ ಹಾಗೂ ಮೇಲ್ಮನೆಯಲ್ಲಿ ಯಾರು ಇರುತ್ತಾರೆಂಬ ಬಗ್ಗೆ ಪಟ್ಟಿಯನ್ನು ತರಿಸಿಕೊಳ್ಳುತ್ತೇನೆ. ಮಾನ್ಯ ನಾಡಗೌಡರೆ, ಪ್ರತಿದಿನ ಕೆಳಮನೆ ಹಾಗೂ ಮೇಲ್ಮನೆಯಲ್ಲಿ ಯಾರ್ಯಾರು ಇರುತ್ತಾರೆಂಬ ಬಗ್ಗೆ ಒಂದು ಲಿಸ್ಟ್‌ನ್ನು ನನಗೆ ಕಳುಹಿಸಿಕೊಡಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಈಗ ತಾವು ಹೇಳಿಬಿಟ್ಟರೆ ಮುಗಿದು ಹೋಗಿ ಬಿಡುತ್ತದೆ, ಆ ವಸ್ತುಸ್ಥಿತಿಯನ್ನು ಮಾನ್ಯ ಎಸ್.ಎಸ್.ಪಾಟೀಲರಿಗೆ ಹೇಳಬೇಕು.

ಅಧ್ಯಕ್ಷರು: ಈಗ ಏನು ತೀರ್ಮಾನವಾಯಿತೆಂದರೆ, ಇವತ್ತು ಆಗಿದ್ದು ಆಗಿ ಹೋಗಲಿ, ಸರ್ಕಾರದ ಪರವಾಗಿ ಇನ್ನು ಮುಂದೆ ನಾವು ಆ ರೀತಿ ಮಾಡುವುದಿಲ್ಲವೆಂದು ತಾವು ಹೇಳಿದರೆ ಮಾನ್ಯ ಸದಸ್ಯರುಗಳು ಇದಕ್ಕೆ ಒಪ್ಪಬಹುದು ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸದಸ್ಯರುಗಳಲ್ಲಿ ಮನವಿಯನ್ನು ಮಾಡುತ್ತೇನೆ, ಇದರಲ್ಲಿ ಮುಚ್ಚಿಡುವಂತಹ ವಿಷಯ ಏನು ಇಲ್ಲ. ನಮ್ಮ ಹಿರಿಯ ಸ್ನೇಹಿತರಾದ ಶ್ರೀ ಧರ್ಮಸಿಂಗ್‌ರವರ ಮಗನ ಮದುವೆಯು ಈ ದಿನ ಇದೆ, ಅದಕ್ಕಾಗಿ ಅನೇಕ ಸದಸ್ಯರು ಅಲ್ಲಿಗೆ ಹೋಗಿದ್ದಾರೆ. ತಾವು ಎಲ್ಲಿಗೆ ಹೋಗಿದ್ದಾರೆಂದು ಕೇಳಿದ್ದೀರಿ, ವಸ್ತುಸ್ಥಿತಿ ಹೀಗಿದೆ, ನಾವು ಸತ್ಯವನ್ನು ಮುಚ್ಚಿಡಬಾರದು ಎಂದು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಸದನಕ್ಕೆ ಅಗೌರವವನ್ನು ತರಬೇಕೆಂದಾಗಲಿ, ಅಥವಾ ಪ್ರತಿಪಕ್ಷದವರಿಗೆ ತಿಳಿಸಬಾರದು ಎಂದು ಏನು ಇಲ್ಲ. 8-10 ಜನ ಮಂತ್ರಿಗಳು ಮಧ್ಯಾಹ್ನ 3 ಗಂಟೆಗೆ ಮದುವೆಗೆ ಹೋಗಿದ್ದಾರೆ. ಇದು ನಮಗೆ ಮೊದಲು ಗೊತ್ತಾಗಲಿಲ್ಲ, ಇಲ್ಲದಿದ್ದರೆ ಈ ದಿನದ ಸಭೆಯನ್ನು ಬಹುಶಃ ಮುಂದೂಡಬಹುದಾಗಿತ್ತು. ನಾಳೆ ಬೆಳಿಗ್ಗೆ ಎಲ್ಲಾ ಸದಸ್ಯರು ಸದನಕ್ಕೆ ಹಾಜರಾಗುತ್ತಾರೆ. ಮಾನ್ಯ ಅಧ್ಯಕ್ಷರೆ, ನಾನು ಮೇಲ್ಮನೆಗೆ ಹೋಗಬೇಕಾಗಿದೆ ಈಗಾಗಲೇ 2-3 ಸಾರಿ ಹೇಳಿಕಳುಹಿಸಿದ್ದಾರೆ ಎಂದು ತಮಗೆ ತಿಳಿಸಿದ್ದೇನೆ. ನಾನು ಮೇಲ್ಮನೆಯಿಂದ ಇಲ್ಲಿಗೆ ವಾಪಸ್ಸು ಬಂದ ತಕ್ಷಣವೇ ಸದನದಲ್ಲಿ ಗಡಿಬಿಡಿಯಾಗುತ್ತಿದೆ ಎಂದು ತಿಳಿಸಿದರು, ನಾನು ಊಟವನ್ನು ಸಹ ಮಾಡದೆ ಈ ಸದನಕ್ಕೆ ಬರುವಷ್ಟರಲ್ಲಿಯೇ ಸದನವು ಅಡ್ಜರ್ನ್ ಆಗಿತ್ತು. ಆದ್ದರಿಂದ ಇದು ಅನಿವಾರ್ಯ ಕಾರಣಗಳಿಂದಾಗಿ ಆಗಿದೆಯೇ

ಹೊರತು, ಸದನಕ್ಕೆ ಅಗೌರವವನ್ನು ತರಬೇಕೆಂದು ಅಲ್ಲ. ಇವತ್ತು ಪ್ರತಿಪಕ್ಷದ ಹಿರಿಯ ನಾಯಕರುಗಳು ಮಾತನಾಡುವವರಿದ್ದಾರೆ, ಬಹಳ ಮುಖ್ಯವಾದಂತಹ ಚರ್ಚೆ ಪ್ರಾರಂಭವಾಗುವುದರಲ್ಲಿ ಇದೆ, ನಮಗೂ ಸಹ ಕೇಳಬೇಕೆಂದು ಆಸಕ್ತಿ ಇದೆ, ಹೊಸ ಸಲಹೆಗಳು ಬರುತ್ತದೆ, ಅವರ ಮಾರ್ಗದರ್ಶನವನ್ನು ಪಡೆಯಬೇಕು ಎನ್ನುವ ಸದುದ್ದೇಶದಿಂದ ನಾವು ಸದನದಲ್ಲಿದ್ದೇವೆ. ಅನಿವಾರ್ಯವಾಗಿ ಹೀಗೆ ಆಗಿದೆ ಎಂದು ಹೇಳಿದ್ದೇನೆ. ಮಾನ್ಯ ಎಸ್‌ಎಸ್ ಪಾಟೀಲರವರು ಈಗಲಾದರೂ ಒಪ್ಪುತ್ತಾರೆಂದು ನನ್ನ ಭಾವನೆಯಾಗಿದೆ, ಇವತ್ತು ಆ ಕಾರಣಗಳಿಗಾಗಿ ತೊಂದರೆಯಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಧರ್ಮಸಿಂಗ್‌ರವರ ಮಗನ ಮದುವೆ ಎಂಬುದು ನಮಗೆ ಗೊತ್ತಿದೆ. ವೈಯಕ್ತಿಕವಾಗಿ ಸದನದಲ್ಲಿ ಕುಳಿತಿರತಕ್ಕಂತಹ ಹಾಗೂ ಸದನದ ಬಾವಿಯಲ್ಲಿರತಕ್ಕಂತಹ ಅನೇಕ ಜನ ಸದಸ್ಯರುಗಳಿಗೆ ಶ್ರೀಮಾನ್ ಧರ್ಮಸಿಂಗ್‌ರವರು ಬಹಳ ಬೇಕಾಗಿರುವಂತಹ ಸ್ನೇಹಿತರಾಗಿದ್ದಾರೆ. ಮದುವೆ ನಿಮಿತ್ತವಾಗಿ ಹೋಗಿರತಕ್ಕಂತಹ ಮಂತ್ರಿಗಳ ಬಗ್ಗೆಯೂ ಸಹ ನಾವು ಅರ್ಥಮಾಡಿಕೊಳ್ಳಬಲ್ಲೆವು. ಮಾನ್ಯ ಅಧ್ಯಕ್ಷರೆ, ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ, ಗೌರವಾನ್ವಿತ ಮಂತ್ರಿಗಳು ವಿಶೇಷವಾಗಿ, ವಿದೇಶಕ್ಕೆ ಹೋದಾಗ, ಮತ್ತು ರಾಜ್ಯವನ್ನು ಬಿಟ್ಟಾಗ, ಹೊರಗಡೆ ಹೋದಾಗ, ಅಧಿವೇಶನಕ್ಕೆ ಬರದೆಹೋದರೆ, ಅವರುಗಳು ಜಾತ್ರೆಗೆ ಹೋಗುವುದು, ಕೊಂಡಕ್ಕೆ, ಮದುವೆಗೆ ಮತ್ತೊಂದಕ್ಕೆ ಹೋಗುವುದು ತಮಗೆ ತಿಳಿಸಿ ತಮ್ಮ ಪರವಾನಗಿಯನ್ನು ಪಡೆದುಕೊಂಡು ಹೋಗಬೇಕಾಗುತ್ತದೆ. ನಾವು ಮಂತ್ರಿಗಳು ಹೋಗಿದ್ದಾರೆಂದು ತಿಳಿದುಕೊಳ್ಳೋಣ, ಅವರು ಹೋಗಿರುವ ಬಗ್ಗೆ ತಮ್ಮ ಹತ್ತಿರ ಪಟ್ಟಿಯಿದ್ದರೆ ದಯವಿಟ್ಟು ಇಂತಿಂಥವರು ನನ್ನ ಅನುಮತಿಯನ್ನು ತೆಗೆದುಕೊಂಡಿದ್ದಾರೆಂದು ನಮಗೆ ತಾವು ಹೇಳಬೇಕು. ನನಗೆ ಗೊತ್ತಿರುವ ಹಾಗೆ, ಮೊದಲನೇ ಸಾಲಿನಲ್ಲಿರುವ 3-4 ಜನ ಮಂತ್ರಿಗಳು ಮದುವೆಗೆ ಹೋಗಿಲ್ಲ, ಎರಡನೆಯದಾಗಿ ಇದು ಮೊದಲನೆಯದಲ್ಲ, ಇವತ್ತು ಈ ರೀತಿಯಾಗಿರುವುದು ಮೊದಲನೆಯದಾಗಿದ್ದರೆ ಖಂಡಿವಾಗಿಯೂ ನಾವು ಸಹಿತ ಸುಮ್ಮನಿರುತ್ತಿದ್ದೆವು. ಪ್ರತಿ ದಿನ ಅಧಿವೇಶನ ನಡೆಯುವಾಗಲೂ ಇದೇ ಗೋಳಾಗಿದೆ, ಆದ್ದರಿಂದ ನಮ್ಮ ಪ್ರತಿಭಟನೆ ಈ ವಿಚಾರದಲ್ಲಿ ಸರ್ಕಾರದ ಧೋರಣೆಯಾಗಿದೆ. ಸಂಸದೀಯ ವ್ಯವಹಾರಗಳ ಬಗ್ಗೆ, ಈ ಸದನದ ಬಗ್ಗೆ ಇರತಕ್ಕಂತಹ ಅಗೌರವವಾಗಿದೆ. ಆದ್ದರಿಂದ ಈ ಪ್ರತಿಭಟನೆಯು ಮುಂದುವರಿಯುತ್ತದೆ. ಆದರೆ ಮಾತನಾಡತಕ್ಕಂತಹ ಹಕ್ಕನ್ನು ನಾವು ಕಳೆದುಕೊಳ್ಳಬಾರದೆಂದು ನಾವು ಮತ್ತೆ ಸಭೆಗೆ ಬಂದಿದ್ದೇವೆ.

ಶ್ರೀ ಡಿ.ಬಿ.ಚಂದ್ರೇಗೌಡ: ಅದಕ್ಕಾಗಿ ನಾನು ಮಾನ್ಯ ಸದಸ್ಯರುಗಳಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ಪುನಃ ಹೀಗೆ ಆಗದೆ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ. ಇಂದು ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲ. ನಾನು ಯಾವ ವಿಚಾರವನ್ನು ಸಹ ಮುಚ್ಚಿಡುವುದಿಲ್ಲ, ಮಂತ್ರಿಮಂಡಲದ ಸಭೆಯಲ್ಲಿ ಕೂಡ ಇದನ್ನು ಹೇಳಿದ್ದಾರೆ. ಸಭೆಯು ನಡೆಯುವ ವೇಳೆಯಲ್ಲಿ ಮಂತ್ರಿಗಳು ಎಲ್ಲೂ ಹೋಗಬಾರದು, ಹಾಗೆ ಒಂದು ವೇಳೆ ಅವರು ಹೋಗುವುದಿದ್ದರೆ ಮೊದಲು ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಹೋಗಬೇಕು ಅಥವಾ ಇನ್ನೊಬ್ಬರಿಗೆ ಅವರ ಕಾರ್ಯ ಜವಾಬ್ದಾರಿಯನ್ನು ವಹಿಸಿಹೋಗಬೇಕೆಂದು ಒಂದು ಸಾರಿಯಲ್ಲ, ಎರಡು-ಮೂರು ಬಾರಿ

ಹೇಳಿದ್ದಾರೆ. ಇಂತಹ ಒಂದು ಅನಿವಾರ್ಯ ಪ್ರಸಂಗವಾಯಿತು, ಸಭೆಯು ನಡೆಯುವುದಕ್ಕೆ ಅನುವು ಮಾಡಿಕೊಡಬೇಕೆಂದು ಹಾಗೂ ಸಭೆಯ ಕಲಾಪಗಳು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾಡಿರುವ ತೀರ್ಮಾನದಂತೆ ಈ ಸಭೆಯು ಮುಂದುವರಿಯುವುದಕ್ಕೆ ತಾವೆಲ್ಲರೂ ಸಹಕರಿಸಬೇಕೆಂದು ತಮ್ಮಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಸುರೇಶ್‌ಕುಮಾರ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಎಸ್. ಸುರೇಶ್ ಕುಮಾರ್(ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಶ್ರೀ ಚಂದ್ರೇಗೌಡರ ಊಟವನ್ನು ತಪ್ಪಿಸಬೇಕೆಂದು ನಮಗೆ ಆಸೆಯಿರಲಿಲ್ಲ. ನಾವು ಆವತ್ತು ಸದನದ ಬಾವಿಗೆ ಬಂದಾಗ ಇಬ್ಬರೇ ಸದಸ್ಯರಿದ್ದರು, ಈಗ 8 ಸದಸ್ಯರು ಹೇಗೆ ಬಂದರು, ಅಂದರೆ ನಮ್ಮ ಪ್ರತಿಭಟನೆಗೆ ನಮ್ಮ ಆಗ್ರಹಕ್ಕೆ ಮಣಿದು 8 ಜನ ಇವತ್ತು ಬಂದಿದ್ದಾರೆ. ನನಗೆ ಒಂದು ವಿಷಯದಲ್ಲಿ ಸಮಾಧಾನವಾಯಿತು, ಬರೀ ವಿರೋಧ ಪಕ್ಷದವರು ಹೇಳಿದರೂ ಕೂಡ ಕೇಳುತ್ತಿರಲಿಲ್ಲ ಎಂದು ನಾವು ತಿಳಿದುಕೊಂಡಿದ್ದೆವು, ಮುಖ್ಯಮಂತ್ರಿಗಳು ಹೇಳಿದರೂ ಕೂಡ, ನಿಮ್ಮ ಮಂತ್ರಿಮಂಡಲದಲ್ಲಿ ಏನೂ ಪ್ರಭಾವವಾಗಿಲ್ಲವೆಂದು ಕೇಳಿ ನನಗೆ ಹಾಲು ಕುಡಿದಷ್ಟು ಸಂತೋಷವಾಯಿತು. ಇದು ಎಷ್ಟು ದಿವಸ ಹೀಗೆ ಮುಂದುವರಿಯುತ್ತದೆಯೋ ನನಗೆ ಗೊತ್ತಿಲ್ಲ. ಆದರೆ ಇವತ್ತು ತಾವು ಹೇಳಿದ ಹಾಗೆ, ಮಾನ್ಯ ಅಧ್ಯಕ್ಷರೂ ಹೇಳಿದ ಹಾಗೆ ಈ ಸಭೆಯ ಕಲಾಪಗಳು ಮುಂದುವರಿಯಬೇಕು. ನಾವು ಕಲಾಪಗಳು ನಡೆಯುವುದಕ್ಕೋಸ್ಕರವಾಗಿ ಸಹಕರಿಸುತ್ತೇವೆ, ಆದರೆ ಒಂದು ಪ್ರಶ್ನೆ ಏನೆಂದರೆ, ಇವತು ಲಾಜಿಕಲ್ ಎಂಡ್‌ಗೆ ಹೋಗಬೇಕು ಎಂದು ಬಂದೆವು. ಅವರು ಸಭಾತ್ಯಾಗ, ನಾವು ಧರಣಿ ಮಾಡಬೇಕೆಂದು ಬಂದೆವು. ಮುಂದೆ ಪುನಃ ಇದೇ ರೀತಿ ಇಬ್ಬರೇ ಸದಸ್ಯರು ಇದ್ದಾಗ ನಾವು ಏನು ಮಾಡಬೇಕೆಂದು ತಾವೇ ಹೇಳಬೇಕು.

Sri D.B.Chandregowda: Let us cross the bridge when we approach it. ಈಗಲೇ ಹೀಗಿರುತ್ತದೆ, ಸೇತುವೆ, ಕಾಲುಸೇತುವೆ ಹಾಕುವುದು ಎಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ಸುರೇಶ್ ಕುಮಾರ್‌ರವರೆ, ತಾವು ಹೈಪಾಥಿಟಿಕಲ್ ಕ್ವೆಶ್ಚನ್ ಅನ್ನು ಏಕೆ ಕೇಳುತ್ತೀರಿ?

ಶ್ರೀ ಎಸ್.ಸುರೇಶ್‌ಕುಮಾರ್: ಈ ಹೌಸ್‌ನಲ್ಲಿ these things have become facts of life.

ಶ್ರೀ ಡಿ.ಬಿ.ಚಂದ್ರೇಗೌಡ: ನಾನು ಬೆಳಿಗ್ಗೆಯೂ ಕೂಡ ಹೇಳಿದ್ದೇನೆ, ನಾನು ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ಸದಸ್ಯನಾಗಿ ಕೆಲಸ ಮಾಡಿದ ಅನುಭವದ ಮೇಲೆ ಹೇಳುತ್ತಿದ್ದೇನೆ. ಅಲ್ಲಿಯೂ ಕೂಡ ಹೆಚ್ಚಾಗಿ ಕೋರಂನ್ನು ಕೇಳುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಅಲ್ಲಿ ಸಭೆಯು ನಡೆಯುತ್ತಿದೆ.

Sri S. Suresh Kumar: Are you suggesting something?

ಶ್ರೀ ಡಿ.ಬಿ.ಚಂದ್ರೇಗೌಡ: ಆ ತರಹ ಸಂದರ್ಭಗಳು ಬರುವುದಿಲ್ಲ, ಇಲ್ಲಿ ವಿರೋಧ

ಪಕ್ಷಗಳು ತಂಬಾ ವಿಜಿಲೆಂಟ್ ಆಗಿರುವುದರಿಂದ, ನಮ್ಮ ಸದಸ್ಯರುಗಳು ಸದನದಲ್ಲಿರದಿದ್ದರೂ ಅವರುಗಳು ಇರುತ್ತಾರೆಂದು ನಮಗೆ ಗೊತ್ತಿದೆ. ಹಾಗಾಗಿ ಅವರುಗಳೆಲ್ಲರೂ ಸದನದ ಗೌರವವನ್ನು ತುಂಬಿಕೊಟ್ಟಿದ್ದಾರೆ. ಆದರೆ ಈ ವಿಚಾರಕ್ಕಾಗಿ ನಾವು ಪುನಃ ಆ ಒಂದು ಮಟ್ಟಕ್ಕೆ ಹೋಗುವುದು ಬೇಡ ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಸುರೇಶ್ ಕುಮಾರ್‌ರವರೆ, ತಮ್ಮ ಪಕ್ಷದ ಸದಸ್ಯರುಗಳಿಗೆ ಧರಣಿಯನ್ನು ಹಿಂತೆಗೆದುಕೊಂಡಿದ್ದೇನೆ, ತಾವುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಎಂದು ತಿಳಿಸಿ.

(ಈ ಹಂತದಲ್ಲಿ ಬಿಜೆಪಿಯ ಸದಸ್ಯರುಗಳು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ಹೋದರು)

ಶ್ರೀ ಜಯಪ್ರಕಾಶ ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಸದನವು ಕಳೆದ ತಿಂಗಳು 31ನೇ ತಾರೀಖಿನವರೆಗೆ ನಡೆಯುತ್ತದೆ ಎಂದು ಇತ್ತು. ಅದನ್ನು ಪುನಃ18ನೇ ತಾರೀಖು ಎಂದು ಮಾಡಿ, 31ನೇ ತಾರೀಖು ಎಂದು ಬದಲಾವಣೆ ಮಾಡಿ ಪುನಃ 5ನೇ ತಾರೀಖಿನವರೆಗೆ ನಡೆಯುತ್ತದೆ ಎಂದು ಮಾಡಿದ್ದಾರೆ. ಇದರ ಅವಶ್ಯಕತೆ ಇತ್ತೇ ಎಂದು ಅನುಮಾನ ಬರುವುದಕ್ಕೆ ಪುರುವಾಗಿದೆ. ಏಕೆಂದರೆ ಇದ್ದಂಥ ದಿನಗಳಲ್ಲಿ ಸರಿಯಾಗಿ ಕೋರಂ ಇಲ್ಲದೆ, ಚರ್ಚೆ ನಡೆಯುವುದಕ್ಕೆ ಅವಕಾಶ ಇಲ್ಲದಿರುವಾಗ ಮೇ 5 ರವರೆಗೆ ಎಕ್ಸ್‌ಟೆಂಡ್ ಮಾಡಿದ್ದೀರಿ. ಈಗ ಪರಿಸ್ಥಿತಿ ಇಂಥದ್ದು ಬಂದಿದೆ. ನಾವು ನಮ್ಮ ಸಮಸ್ಯೆಗಳನ್ನು ಹೇಳಬೇಕಾಗುತ್ತದೆ. ಈಗ ಬಿಎಸಿ.ಯಲ್ಲಿ ನಮ್ಮ ವಯಸ್ಸಿನವರು ಯಾರೂ ಇದ್ದಹಾಗೆ ಕಾಣಲಿಲ್ಲ. ಏಕೆಂದರೆ ಮಕ್ಕಳಿಗೆಲ್ಲಾ ಶಾಲೆ ರಜೆ ಇರುವ ಈ ಸಂದರ್ಭದಲ್ಲಿ ನಾವು ಅವರೊಟ್ಟಿ ಇರಲಿಕ್ಕೂ ಆಗುತ್ತಿಲ್ಲ. ಇಲ್ಲಿ ಸದಗೆನಕ್ಕೆ ಬಂದರೆ ಕಲಾಪಗಳು ಸರಿಯಾಗಿ ನಡೆಯುತ್ತಿಲ್ಲ. ಈ ಒಂದು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ ಇಬ್ಬರು ಸಣ್ಣ ಮಕ್ಕಳು ಇರುವವರನ್ನು ಬಿಎಸಿ.ಯಲ್ಲಿ ಹಾಕಿಕೊಂಡರೆ ನಮ್ಮ ಸಮಸ್ಯೆ ಕೂಡ ಪರಿಹಾರವಾಗುತ್ತದೆ ಎಂದು ನನ್ನ ಭಾವನೆ.

ಅಧ್ಯಕ್ಷರು: ಶೂನ್ಯ ವೇಳೆಗೆ ಸಂಬಂಧಪಟ್ಟಂತೆ ಎರಡು-ಮೂರು ಸಬ್ಜೆಕ್ಟ್‌ಗಳಿವೆ. ಅದಾದಮೇಲೆ ರಾಮದಾಸ್‌ರವರ ಒಂದು ಸಬ್ಜೆಕ್ಟ್ ಇದೆ. ಅವರಿಗೆ ನಾಳೆ ಮೈಸೂರಿನಲ್ಲಿ ಮೇಯರ್ ಚುನಾವಣೆ ಇದೆಯಂತೆ. ಅವರದು ಹತ್ತು ನಿಮಿಷವಾಗುತ್ತದೆ. ಅದನ್ನು ಮುಗಿಸಿ ಗಮನ ಸೆಳೆಯುವ ಸೂಚನೆ ಬಗ್ಗೆ ಒಬ್ಬ ಸದಸ್ಯರು ಬರೆದುಕೊಟ್ಟಿದ್ದಾರೆ. ಅವರು ಇಲ್ಲ. ಇನ್ನೊಬ್ಬರದು ಇದೆ. ಅವರದು ಮುಗಿಸಿಕೊಂಡು ಇವೆಲ್ಲಾ ಸೇರಿ ಅರ್ಧ ಗಂಟೆಯೊಳಗೆ ಮುಗಿದುಹೋಗುತ್ತದೆ.

ಶ್ರೀಮಾನ್ ವೈ.ಕೆ.ರಾಮಯ್ಯನವರು ಇನ್ನು 20 ನಿಮಿಷದಲ್ಲಿ ತಮ್ಮ ಭಾಷಣ ಪ್ರಾರಂಭ ಮಾಡಬಹುದು ಎಂದು ಅಂದಾಜು ಇದೆ. ಈಗ ಶೂನ್ಯವೇಳೆಗೆ ಸಂಬಂಧಪಟ್ಟಂತೆ ವಿಷಯ ತೆಗೆದುಕೊಳ್ಳೋಣ.

ಕಡೂರು ತಾಲ್ಲೂಕಿನ ಎಸ್.ಬಿದರೆ ಗ್ರಾಮದಲ್ಲಿ ಹಾಲು ಉತ್ಪಾದಕರ ಸಂಘದಿಂದ ರೈತರಿಗೆ ಹಣಪಾವತಿ.